ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಕ್ರೀಡಾ ಸಮಿತಿಯವರು ನಮಗೆ ಇನ್ನೂ ಅಂದಾಜು ಪಟ್ಟಿ ಕಳುಹಿಸಿಕೊಟ್ಟಿಲ್ಲ. ನಮ್ಮಲ್ಲಿ ಸಭ್ಯಕ್ಕೆ ಇದ್ದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಅದನ್ನು ನಾನು ಸದನಕ್ಕೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಹೆಚ್ಚು ಹಣ ಖರ್ಚುಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮಟ್ಟದಲ್ಲಿ ಕ್ರೀಡಾ ಸಮಿತಿಗಳಲ್ಲಿ ಒಬ್ಬರು ಎ.ಸಿ. ಮತ್ತು ಡಿ.ವೈ.ಎಸ್.ಪಿ. ಯವರು ಇನ್ನೊಬ್ಬ ಆಫೀಸರ್ ಇರುತ್ತಾರೆ. ಬರೀ ಅಪಿಷಿಯಲ್ಸ್ ಕಮಿಟಿ ಇದೆ. ಅಲ್ಲಿ ಸುಮಾರು ೬ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಬ್ಯಾಂಕಿನಲ್ಲಿ ಒಟ್ಟು ೧೫ ಲಕ್ಷ ರೂಪಾಯಿಗಳಿದೆ. ಆದರಲ್ಲಿ ಸುಮಾರು ೪ ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ಈ ಎರಡೂ ಕ್ರೀಡಾಂಗಣಗಳಿಗೆ ಅಲ್ಲಿನ ಆಫೀಸರ್ಸ್ ಮಾನ ಬಂದ ಹಾಗೆ ಹಣ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಹೇಗೆ ? ಅಲ್ಲಿನ ಕೆಲಸದ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡುವುದೇ ಇಲ್ಲವೇ.....

ಅಧ್ಯಕ್ಷರು.—ನೀವು ಡಿಟೇಲ್ಸ್ ಬರೆದು ಕೊಡಿ.

ಶ್ರೀ ಶಿವಾನಂದ ಎಚ್. ಕೌಜಲಗಿ.—ನಾನು ಈ ಪ್ರಶ್ನೆಯನ್ನು ೩-೪ ಸಾರಿ ಕೇಳಿದ್ದೇನೆ. ಇದೇ ಉತ್ತರ ಬರುತ್ತಿದೆ. ಮಾಹಿತಿ ತರಿಸಿಕೊಳ್ಳುವುದಕ್ಕೆ ಆಗಲಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಅವರು ಬಂದು ೮ ದಿವಸ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಸಾರ್ವಜನಿಕರ ಹಣ ಅಲ್ಲಿ ಲ್ಯಾಪ್ಸ್ ಆಗುತ್ತಿದೆ.

ಅಧ್ಯಕ್ಷರು.—ಮಂಡ್ಯ ಜಿಲ್ಲಾ ಪರಿಷತ್ತಿನಲ್ಲಿ ಸುಮಾರು ೭ ಕೋಟಿ ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಂದರೆ ಹೇಳುವವರು ಕೇಳುವವರು ಯಾರೂ ಇಲ್ಲವೇ ?

ಅಧ್ಯಕ್ಷರು.—ಈ ಹೇಳುವವರು ಕೇಳುವವರು ಈಗ ಬಂದಿದ್ದಾರೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಲ್ಲಿ ಖರ್ಚಾಗಿರುವುದು ಕೇವಲ ೩೮ ಸಾವಿರ ರೂಪಾಯಿಗಳು ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ ?

ಶ್ರೀ ಎಸ್. ರಮೇಶ್,—ಮಾನ್ಯ ಸದಸ್ಯರು ಹೇಳುವುದು ಸರಿ ಇದೆ. ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೋ ಅದನ್ನು ನಾನು ಇಲ್ಲಿ ಕೊಟ್ಟಿದ್ದೇನೆ. ನಾನು ಸಭ್ಯದಲ್ಲಿಯೇ ಒಂದು ವಿಸಿಟಿಂಗ್ ಕರೆದು ಅಲ್ಲಿಂದ ಏತಕ್ಕೆ ಮಾಹಿತಿ ಬಂದಿಲ್ಲ ಎಂದು ವಿಚಾರ ಮಾಡುತ್ತೇನೆ, ಆ ವಿಸಿಟಿಂಗ್‌ಗೆ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆ. ಅವರ ಎದುರುಗಡೆಯೇ ಇದನ್ನು ತೀರ್ಮಾನ ಮಾಡೋಣ.

ಚಿನ್ನಪ್ಪ ರೆಡ್ಡಿ ವರದಿಯ ಬಗ್ಗೆ

೧೧೬. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).— ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗ ತನ್ನ ವರದಿಯನ್ನು ಯಾವಾಗ ಸರ್ಕಾರಕ್ಕೆ ಸಲ್ಲಿಸಿತು;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು;

ಇ) ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೭-೪-೯೦ರಂದು ಸಲ್ಲಿಸಿದೆ.

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಕ್ರೀಡಾ ಸಮಿತಿಯವರು ನಮಗೆ ಇನ್ನೂ ಅಂದಾಜು ಪಟ್ಟಿ ಕಳುಹಿಸಿಕೊಟ್ಟಿಲ್ಲ. ನಮ್ಮಲ್ಲಿ ಸಭ್ಯಕ್ಕೆ ಇದ್ದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಅದನ್ನು ನಾನು ಸದನಕ್ಕೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಹೆಚ್ಚು ಹಣ ಖರ್ಚುಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮಟ್ಟದಲ್ಲಿ ಕ್ರೀಡಾ ಸಮಿತಿಗಳಲ್ಲಿ ಒಬ್ಬರು ಎ.ಸಿ. ಮತ್ತು ಡಿ.ವೈ.ಎಸ್.ಪಿ. ಯವರು ಇನ್ನೊಬ್ಬ ಆಫೀಸರ್ ಇರುತ್ತಾರೆ. ಬರೀ ಅಪಿಷಿಯಲ್ಸ್ ಕಮಿಟಿ ಇದೆ. ಅಲ್ಲಿ ಸುಮಾರು ೬ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಬ್ಯಾಂಕಿನಲ್ಲಿ ಒಟ್ಟು ೧೫ ಲಕ್ಷ ರೂಪಾಯಿಗಳಿದೆ. ಆದರಲ್ಲಿ ಸುಮಾರು ೪ ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ಈ ಎರಡೂ ಕ್ರೀಡಾಂಗಣಗಳಿಗೆ ಅಲ್ಲಿನ ಆಫೀಸರ್ಸ್ ಮಾನ ಬಂದ ಹಾಗೆ ಹಣ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಹೇಗೆ ? ಅಲ್ಲಿನ ಕೆಲಸದ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡುವುದೇ ಇಲ್ಲವೇ.....

ಅಧ್ಯಕ್ಷರು.—ನೀವು ಡಿಟೇಲ್ಸ್ ಬರೆದು ಕೊಡಿ.

ಶ್ರೀ ಶಿವಾನಂದ ಎಚ್. ಕೌಜಲಗಿ.—ನಾನು ಈ ಪ್ರಶ್ನೆಯನ್ನು ೩-೪ ಸಾರಿ ಕೇಳಿದ್ದೇನೆ. ಇದೇ ಉತ್ತರ ಬರುತ್ತಿದೆ. ಮಾಹಿತಿ ತರಿಸಿಕೊಳ್ಳುವುದಕ್ಕೆ ಆಗಲಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಅವರು ಬಂದು ೮ ದಿವಸ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಸಾರ್ವಜನಿಕರ ಹಣ ಅಲ್ಲಿ ಲ್ಯಾಪ್ಸ್ ಆಗುತ್ತಿದೆ.

ಅಧ್ಯಕ್ಷರು.—ಮಂಡ್ಯ ಜಿಲ್ಲಾ ಪರಿಷತ್ತಿನಲ್ಲಿ ಸುಮಾರು ೭ ಕೋಟಿ ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಂದರೆ ಹೇಳುವವರು ಕೇಳುವವರು ಯಾರೂ ಇಲ್ಲವೇ ?

ಅಧ್ಯಕ್ಷರು.—ಈ ಹೇಳುವವರು ಕೇಳುವವರು ಈಗ ಬಂದಿದ್ದಾರೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಲ್ಲಿ ಖರ್ಚಾಗಿರುವುದು ಕೇವಲ ೩೮ ಸಾವಿರ ರೂಪಾಯಿಗಳು ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ ?

ಶ್ರೀ ಎಸ್. ರಮೇಶ್,—ಮಾನ್ಯ ಸದಸ್ಯರು ಹೇಳುವುದು ಸರಿ ಇದೆ. ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೋ ಅದನ್ನು ನಾನು ಇಲ್ಲಿ ಕೊಟ್ಟಿದ್ದೇನೆ. ನಾನು ಸಭ್ಯದಲ್ಲಿಯೇ ಒಂದು ವಿಸಿಟಿಂಗ್ ಕರೆದು ಅಲ್ಲಿಂದ ಏತಕ್ಕೆ ಮಾಹಿತಿ ಬಂದಿಲ್ಲ ಎಂದು ವಿಚಾರ ಮಾಡುತ್ತೇನೆ, ಆ ವಿಸಿಟಿಂಗ್‌ಗೆ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆ. ಅವರ ಎದುರುಗಡೆಯೇ ಇದನ್ನು ತೀರ್ಮಾನ ಮಾಡೋಣ.

ಚಿನ್ನಪ್ಪ ರೆಡ್ಡಿ ವರದಿಯ ಬಗ್ಗೆ

೧೧೬. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).— ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗ ತನ್ನ ವರದಿಯನ್ನು ಯಾವಾಗ ಸರ್ಕಾರಕ್ಕೆ ಸಲ್ಲಿಸಿತು;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು;

ಇ) ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೭-೪-೯೦ರಂದು ಸಲ್ಲಿಸಿದೆ.

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಕ್ರೀಡಾ ಸಮಿತಿಯವರು ನಮಗೆ ಇನ್ನೂ ಅಂದಾಜು ಪಟ್ಟಿ ಕಳುಹಿಸಿಕೊಟ್ಟಿಲ್ಲ. ನಮ್ಮಲ್ಲಿ ಸಭ್ಯಕ್ಕೆ ಇದ್ದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಅದನ್ನು ನಾನು ಸದನಕ್ಕೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಹೆಚ್ಚು ಹಣ ಖರ್ಚುಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮಟ್ಟದಲ್ಲಿ ಕ್ರೀಡಾ ಸಮಿತಿಗಳಲ್ಲಿ ಒಬ್ಬರು ಎ.ಸಿ. ಮತ್ತು ಡಿ.ವೈ.ಎಸ್.ಪಿ. ಯವರು ಇನ್ನೊಬ್ಬ ಆಫೀಸರ್ ಇರುತ್ತಾರೆ. ಬರೀ ಅಪಿಷಿಯಲ್ಸ್ ಕಮಿಟಿ ಇದೆ. ಅಲ್ಲಿ ಸುಮಾರು ೬ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಬ್ಯಾಂಕಿನಲ್ಲಿ ಒಟ್ಟು ೧೫ ಲಕ್ಷ ರೂಪಾಯಿಗಳಿದೆ. ಆದರಲ್ಲಿ ಸುಮಾರು ೪ ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ಈ ಎರಡೂ ಕ್ರೀಡಾಂಗಣಗಳಿಗೆ ಅಲ್ಲಿನ ಆಫೀಸರ್ಸ್ ಮಾನ ಬಂದ ಹಾಗೆ ಹಣ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಹೇಗೆ ? ಅಲ್ಲಿನ ಕೆಲಸದ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡುವುದೇ ಇಲ್ಲವೇ.....

ಅಧ್ಯಕ್ಷರು.—ನೀವು ಡಿಟೇಲ್ಸ್ ಬರೆದು ಕೊಡಿ.

ಶ್ರೀ ಶಿವಾನಂದ ಎಚ್. ಕೌಜಲಗಿ.—ನಾನು ಈ ಪ್ರಶ್ನೆಯನ್ನು ೩-೪ ಸಾರಿ ಕೇಳಿದ್ದೇನೆ. ಇದೇ ಉತ್ತರ ಬರುತ್ತಿದೆ. ಮಾಹಿತಿ ತರಿಸಿಕೊಳ್ಳುವುದಕ್ಕೆ ಆಗಲಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಅವರು ಬಂದು ೮ ದಿವಸ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಸಾರ್ವಜನಿಕರ ಹಣ ಅಲ್ಲಿ ಲ್ಯಾಪ್ಸ್ ಆಗುತ್ತಿದೆ.

ಅಧ್ಯಕ್ಷರು.—ಮಂಡ್ಯ ಜಿಲ್ಲಾ ಪರಿಷತ್ತಿನಲ್ಲಿ ಸುಮಾರು ೭ ಕೋಟಿ ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಂದರೆ ಹೇಳುವವರು ಕೇಳುವವರು ಯಾರೂ ಇಲ್ಲವೇ ?

ಅಧ್ಯಕ್ಷರು.—ಈ ಹೇಳುವವರು ಕೇಳುವವರು ಈಗ ಬಂದಿದ್ದಾರೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಲ್ಲಿ ಖರ್ಚಾಗಿರುವುದು ಕೇವಲ ೩೮ ಸಾವಿರ ರೂಪಾಯಿಗಳು ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ ?

ಶ್ರೀ ಎಸ್. ರಮೇಶ್,—ಮಾನ್ಯ ಸದಸ್ಯರು ಹೇಳುವುದು ಸರಿ ಇದೆ. ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೋ ಅದನ್ನು ನಾನು ಇಲ್ಲಿ ಕೊಟ್ಟಿದ್ದೇನೆ. ನಾನು ಸಭ್ಯದಲ್ಲಿಯೇ ಒಂದು ವಿಸಿಟಿಂಗ್ ಕರೆದು ಅಲ್ಲಿಂದ ಏತಕ್ಕೆ ಮಾಹಿತಿ ಬಂದಿಲ್ಲ ಎಂದು ವಿಚಾರ ಮಾಡುತ್ತೇನೆ, ಆ ವಿಸಿಟಿಂಗ್‌ಗೆ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆ. ಅವರ ಎದುರುಗಡೆಯೇ ಇದನ್ನು ತೀರ್ಮಾನ ಮಾಡೋಣ.

ಚಿನ್ನಪ್ಪ ರೆಡ್ಡಿ ವರದಿಯ ಬಗ್ಗೆ

೧೧೬. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).— ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗ ತನ್ನ ವರದಿಯನ್ನು ಯಾವಾಗ ಸರ್ಕಾರಕ್ಕೆ ಸಲ್ಲಿಸಿತು;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು;

ಇ) ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೭-೪-೯೦ರಂದು ಸಲ್ಲಿಸಿದೆ.

ಶ್ರೀ ಬಿ. ಶಿವಣ್ಣ.— ಈಗ ಈ ರಿಪೋರ್ಟ್ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ.

ಶ್ರೀ ಕೆ. ಲಕ್ಕಪ್ಪ.— ನಾನು ಕೇಳುತ್ತಿರತಕ್ಕಂಥ ಪ್ರಶ್ನೆ, ಇದು ವೈಜ್ಞಾನಿಕ ದೃಷ್ಟಿಯಿಂದ ತಯಾರು ಮಾಡಿಲ್ಲ ಎನ್ನುವ ಅಭಿಪ್ರಾಯ ಇದೆ. ಈ ಕಮಿಷನ್ ಸರಿಯಾದ ರೀತಿಯಲ್ಲಿ ವರದಿ ತಯ್ಯಾರು ಮಾಡಿಲ್ಲ. ಆದ್ದರಿಂದ. ಇದನ್ನು ಸರ್ಕಾರ ತಿರಸ್ಕಾರ ಮಾಡಿ ಬೇರೆ ವೈಜ್ಞಾನಿಕವಾದ ರೀತಿಯಲ್ಲಿ ಮತ್ತು ಸರಿಯಾದ ಆಧಾರದ ಮೇಲೆ ಈ ರಾಜ್ಯದ ಎಲ್ಲ ಜನತೆಗೂ ಅನುಕೂಲವಾಗುವಂತಹ ಆಯೋಗವನ್ನು ರಚನೆ ಮಾಡುವುದಕ್ಕೆ ಸರ್ಕಾರ ತಯಾರಾಗಿದೆಯೇ? ಇದಕ್ಕೆ ತಾವು ಉತ್ತರ ಹೇಳಬೇಕರಿ.

೧೨–೦೦ ಎ.ಎಂ.

ಏಕೆಂದರೆ ಇದು ನನ್ನ ವೈಯಕ್ತಿಕ ಅಭಿಪ್ರಾಯವೇನೂ ಅಲ್ಲ, ನಾನು ಕೇಳುತ್ತಿರತಕ್ಕಂಥದ್ದು ಏನೆಂದರೆ ಚಿನ್ನಪ್ಪರೆಡ್ಡಿ ಆಯೋಗವನ್ನು ತಿರಸ್ಕಾರ ಮಾಡುವ ಬಗ್ಗೆ ಸರ್ಕಾರ ಏನಾದರೂ ಪರಿಶೀಲನೆಯನ್ನು ಮಾಡುತ್ತಿದೆಯೇ ಅಥವಾ ಇಲ್ಲವೇ ?

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದು ಸಭೆ ಕಮಿಟಿಯ ಮುಂದೆ ಇದೆ. ಇದು ಈಗ ಪರಿಶೀಲನೆಯಲ್ಲಿದೆ ಅಷ್ಟೆ.

ಶ್ರೀ ಕೆ. ಲಕ್ಕಪ್ಪ.—ಏತಕ್ಕಾಗಿ ಅದು ಸಬ್ ಕಮಿಟಿಯ ಮುಂದೆ ಇದೆ ?

ಶ್ರೀ ಬಿ. ಶಿವಣ್ಣ.—ಅದರ ಬಗ್ಗೆ ಸ್ಟಡಿ ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ —ಅದರಲ್ಲಿ ಏನು ಸ್ಟಡಿ ಮಾಡಬೇಕು ?

ಅಧ್ಯಕ್ಷರು.—ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ನೀವು ಹೇಳುವುದನ್ನು ಕೂಡಾ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರೋಣ ಎಂದು ಅವರ ಜೊಚ್ಚಲ ಭಾಷಣದಲ್ಲಿ ಅವರು ಇಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದರು.

(Some Hon. Members were standing near the passege)

MR. SPEAKER.—Would the Hon'ble Members may kindly take their seats, otherwise the passage will be blocked.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಶಿವಣ್ಣನವರು ಆಗಲೂ ಸಹ ಇದೇ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ನಾಳೆ ನಾಡಿದ್ದೂ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರುತ್ತೇವೆ ಎನ್ನತಕ್ಕಂಥ ಮಾತನ್ನು ಈ ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಮತ್ತೆ ಇದನ್ನು ಪರಿಶೀಲನೆ ಮಾಡುತ್ತೇವೆ, ಇದು ಸಚಿವ ಸಂಪುಟದ ಉಪಸಮಿತಿಯ ಮುಂದೆ ಇದೆ ಎಂದು ಹೇಳುತ್ತಾರೆ. ಒಂದು ಮಂತ್ರಿಮಂಡಲ ಹೋಯಿತು, ಈಗ ಎರಡನೇ ಮಂತ್ರಿಮಂಡಲ ಅಧಿಕಾರಕ್ಕೆ ಬಂದಿದೆ. ಈಗ ಮತ್ತೆ ಅವಕ್ಕೆ ಉಪಸಮಿತಿಯನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಮಧ್ಯದಲ್ಲಿ ಹಿಂದಿನ ಸರ್ಕಾರದ ಆಜ್ಞೆ ಏನು ಇತ್ತು ಅಂದರೆ ಆರು ತಿಂಗಳ ಕಾಲ ಈ ಹಿಂದಿನ ಮೀಸಲಾತಿ ನೀತಿಯನ್ನೇ ಮುಂದುವರಿಸಬೇಕು ಎಂದು, ನಿಮ್ಮ ಅದೃಷ್ಟಕ್ಕೆ ಹತ್ತು ದಿವಸಗಳ ಕಾಲ ರಾಜ್ಯಪಾಲರ ಅಡಳಿತ ಬಂದು ಸರ್ಕಾರದ ಅಧಿಕಾರಿಗಳೇ ಈ ಕೆಲಸವನ್ನು ಮಾಡಿಕೊಂಡಿದ್ದಾರೆ. ನೀವು ಇನ್ನೈದು ತಿಂಗಳ ಒಳಗಡೆ ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು. ನನ್ನ ಅಭಿಪ್ರಾಯದಲ್ಲಿ ಇದನ್ನು ನೀವು ಜಾರಿಗೊಳಿಸಬೇಕು ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದಾಗಿ ಮುಂದಿನ ಐದೂವರೆ ತಿಂಗಳ ಒಳಗಡೆ ಅಂದರೆ ಈಗಿರತಕ್ಕಂಥ ಹಾಲಿ ಇರತಕ್ಕಂಥ ಸರ್ಕಾರದ ಆಜ್ಞೆಯ ಜೀವ ಮುಗಿಯುವುದರೊಳಗಾಗಿ ಈ ವರದಿಯ ಬಗ್ಗೆ ನೀವು ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವೇ ಹೇಗೆ ?

ಶ್ರೀ ಬಿ. ಶಿವಣ್ಣ.—ಇದು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇದೆ. ನಾನು ಈಗಾಗಲೇ ಹೇಳಿಬಿಟ್ಟಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಈ ಚಿನ್ನಪ್ಪರೆಡ್ಡಿ ಆಯೋಗದ ಶಿಫಾರಸ್ಸಿನ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಸರ್ಕಾರ ಏನಾದರೂ ಈ ವರದಿಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಸಿದ್ಧವಾಗಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಆಯೋಗದ ರಚನೆಯಾಗುವುದಕ್ಕೆ ಹಿನ್ನೆಲೆ ಏನು ಎನ್ನತಕ್ಕಂಥ ವಿಚಾರ ನಿಮಗೆಲ್ಲಾ ಗೊತ್ತಿರತಕ್ಕಂಥದ್ದು. ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಆಗಿರತಕ್ಕಂಥ ಆದೇಶ ಇದೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಈಗ ನಮ್ಮ ಉದ್ದೇಶ ಈ ಸಮಾಜದಲ್ಲಿ ಯಾವ ವರ್ಗದವರು ಕೆಲವು ಸೌಲಭ್ಯಗಳಿಂದ ವಂಚಿತರಾಗಿದಾರೆ, ಆ ವಂಚನೆಗೆ ಒಳಪಟ್ಟಿರತಕ್ಕಂಥ ವರ್ಗಗಳಿಗೆ ಸೌಲಭ್ಯವನ್ನು ಕೊಡಬೇಕು ಎನ್ನತಕ್ಕಂಥ ಆನಿಸಿಕೆ ಹಿಂದಿನ ಎಲ್ಲಾ ರಾಜಕೀಯ ಪಕ್ಷಗಳವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಚುನಾವಣಾ ಕಾಲದಲ್ಲಿ ಕೂಡಾ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಈಗ ನೇಮಕಾತಿ ವಿತಕ್ಕೆ ಆಯಿತು ಎನ್ನತಕ್ಕಂಥ ಪ್ರಶ್ನೆ ನಮ್ಮ ಮುಂದೆ ಇಲ್ಲ. ಈಗ ಮುಂದೆ ಏನಾಗಬೇಕು ಎನ್ನತಕ್ಕಂಥ ಪ್ರಶ್ನೆ ಬಗ್ಗೆ ಮಾತ್ರ ನಾವು ಪೂರ್ತನಾಡತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಹೇಳಿದ್ದು ನಿಜ. ಈ ವಿಚಾರದ ಬಗ್ಗೆ ಬಹಳಷ್ಟು ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಸಮುದ್ದೇಶದಿಂದ ವೀರೇಂದ್ರ ಪಾಟೀಲರ ಸರ್ಕಾರ, ಅವರ ನಾಯಕತ್ವದ ಸರ್ಕಾರ ಇದ್ದಾಗ ಅವರ ಮಂತ್ರಿಮಂಡಲದ ಒಂದು ಉಪ ಸಮಿತಿ ರಚನೆಯಾಗಿ ಇದರ ಬಗ್ಗೆ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ಆದು ಬದಲಾವಣೆ ಆಯಿತು. ಈಗ ನಮ್ಮ ಆಸೆ ಯಾವುದೇ ಕಾಲಕ್ಕೂ ಕೂಡಾ ಇದನ್ನು ತಡಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನು ನಮ್ಮ ಸರ್ಕಾರ ಇಟ್ಟುಕೊಂಡಿಲ್ಲ. ಕೆಲವರು ಕೆಲವು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಹೇಳಿದ ಮೇಲೆ, ಶೀಘ್ರವಾಗಿ ಆ ಸೌಲಭ್ಯವನ್ನು ಅವರಿಗೆ ಒದಗಿಸತಕ್ಕಂಥದ್ದು ಈ ಪ್ರಶ್ನೆಗೆ ಉತ್ತರ. ಅದನ್ನು ಬಿಟ್ಟರೆ ಬೇರೆ ಇನ್ನೇನೂ ಇಲ್ಲ. ಆದುದರಿಂದ ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಏನೆಂದರೆ ಇದನ್ನು ಆದಷ್ಟು ಶೀಘ್ರವಾಗಿ ಏನು ತಾತ್ಪರ್ಯ ಒಂದು ಕಾಲವನ್ನು ಹೇಳಿದ್ದೀರಿ, ಅದನ್ನು ನಾವು ಗಮನದಲ್ಲಿಟ್ಟುಕೊಂಡು, ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಶೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಪೂರ್ತನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಆ ರೀತಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಇದರ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೆ ? ಅಥವಾ ಆ ರೀತಿಯ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಆ ಅಭಿಪ್ರಾಯವನ್ನು ಸರ್ಕಾರ ಇಟ್ಟುಕೊಂಡಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಕೇಂದ್ರ ಸರ್ಕಾರ ಮಂಡಲ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲಿಕ್ಕಾಗಿ ಒಂದು ಪ್ರಯತ್ನವನ್ನು ಮಾಡಿತ್ತು. ಆದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದಿಂದ ತೀರ್ಮಾನ ಏನು ಬರುತ್ತದೋ ಮುಂದೆ ನೋಡೋಣ. ಕೇಂದ್ರ ಸರ್ಕಾರದ ಮಂಡಲ ಆಯೋಗದ ಸಮಿತಿಯು ಅನುಷ್ಠಾನ ರಾಜ್ಯಗಳಲ್ಲಿ ಆಗಬೇಕಾದರೆ, ರಾಜ್ಯದಲ್ಲೂ ಕೂಡಾ ಈಗ ಇರತಕ್ಕಂಥ ವಿಾಸಲಾತಿ ನೀತಿಗೆ ಹೊಂದಿಕೊಂಡಿದೆ. ಆದುದರಿಂದ ಈ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಮಂಡಲ ಆಯೋಗದ ವರದಿಗೆ ಈಗ ಇರತಕ್ಕಂಥ ದ್ವಂದ್ವಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ವೀರೇಂದ್ರ ಪಾಟೀಲರ ಸರ್ಕಾರ ಈ ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಬಗ್ಗೆ ಯೋಜನೆಯನ್ನು ಮಾಡುವುದಕ್ಕಿಂತ ಮುಂಚೆ ಮಂಡಲ ಆಯೋಗದ ವರದಿ ಬಂದಾಗಲೂ ಕೂಡಾ ಈ ಕೆಲವು ವಿಚಾರಗಳಲ್ಲಿ ಸಾಮ್ಯ ಬರುತ್ತದೆ. ಕೆಲವು ವಿಚಾರಗಳಲ್ಲಿ ವಿರೋಧ ಕೂಡಾ ಬರುತ್ತದೆ ಎಂದು ಗಮನಿಸಿತ್ತು. ಇದು ತಮಗೂ ಗೊತ್ತಿದೆ ಎಂದು ಭಾವಿಸಿದ್ದೇನೆ. ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕಂಥ ಕೆಲವು ಶೀರ್ಮಾನಗಳನ್ನು ನೋಡಿ ಅದನ್ನೂ ನಾವು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳಬೇಕಾಗಿದೆ. ಕೆಲವು ಜಾತಿಗಳು ಆಲ್ಲಿ ಬ್ಯಾಕ್‌ವರ್ಡ್ ಆಗಿದ್ದರೆ ಇಲ್ಲಿ ಫಾರ್ವರ್ಡ್ ಆಗಿರುತ್ತವೆ. ಬೇರೆ ರಾಜ್ಯದಲ್ಲಿ ಅವರೂ ಕೂಡಾ ಅದೇ ರೀತಿ ಇರುತ್ತಾರೆ. ಈ ದ್ವಂದ್ವಗಳ ಬಗ್ಗೆ ತಾವು ಹೇಳಿದ್ದು ಸರಿಯಾಗಿದೆ. ಇಂಥದ್ದನ್ನು ನಾವು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ಈ ರೀತಿ ದ್ವಂದ್ವ ಇರುವುದರಿಂದ ಇದನ್ನು ನೋಡದಿದ್ದರೆ ಕೆಲವು ವರ್ಗದವರಿಗೆ ಅನ್ಯಾಯ ಆಗಿಬಿಡುತ್ತದೆ. ತಾವು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ವರದಿಯ ಬಗ್ಗೆ ತಾಸನ ಸಭೆಯಲ್ಲಿ ಏತಕ್ಕೆ ಚರ್ಚೆ ಆಗ ಬಾರದು ?

ಅಧ್ಯಕ್ಷರು.—ಯಾರಾದರೂ ಸೂಚನೆಯನ್ನು ಕಳುಹಿಸಿದಾಗ ಈ ಪ್ರಶ್ನೆ ಬರುತ್ತದೆ.

ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರು ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸುವ ಬಗ್ಗೆ

(೨೦೬) ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸಲು ಸರ್ಕಾರಕ್ಕೆ ಪುನವಿಗಳು ಬಂದಿರುವುದು ನಿಜವಲ್ಲವೆ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವರು).—

(ಅ) ನಿಜ.

(ಆ) ಗುಡಗೂರ್ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗಾಗಿ ೧೯೮೯-೯೦ನೇ ಸಾಲಿನಲ್ಲಿ ಎಷ್ಟು ಕೊಠಡಿಗಳನ್ನು ಕಟ್ಟಿಸಲಿಕ್ಕೆ ಸರ್ಕಾರ ಯೋಜನೆಯನ್ನು ಮಾಡಿದೆ ಮತ್ತು ಆ ಯೋಜನೆಯ ಸಲುವಾಗಿ ಎಷ್ಟು ಹಣವನ್ನು ವ್ಯವಸ್ಥೆಗೊಳಿಸಿದೆ ? ಇದರಲ್ಲಿ ರಾಣೆಬೆನ್ನೂರು ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಾಸ್ಟೆಲ್‌ನ್ನು ಕಟ್ಟಿಸುತ್ತೀರೋ ಹೇಗೆ ? ಅದನ್ನು ಈ ವರ್ಷವೇ ಮಂಜೂರು ಮಾಡುತ್ತೀರೋ ಹೇಗೆ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿರತಕ್ಕಂಥದ್ದು ಡೈರೆಕ್ಟೊರೇಟ್ ಆಫ್ ಬ್ಯಾಕ್‌ವಾರ್ಡ್ ಅಂಡ್ ಮೈನಾರಿಟೀಸ್ ಅವರಿಂದ ರೆಕಮೆಂಡ್ ಆಗಿ ಸರ್ಕಾರಕ್ಕೆ ಬಂದಿದೆ. ಸರ್ಕಾರದವರು ಈ ಸಲ ೨೫ ಹಾಸ್ಟೆಲ್‌ಗಳನ್ನು ಕಟ್ಟುವಂಥ ನಿರ್ಣಯವನ್ನು ಮಾಡಿದ್ದಾರೆ. ಇದನ್ನು ಬಜೆಟ್‌ನಲ್ಲಿ ಸಹ ಹೇಳಿದ್ದೇವೆ ಆ ಪ್ರಕಾರ ತಮ್ಮ ಅಪ್ಲಿಕೇಷನ್ನೂ ಕೂಡಾ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಈ ೨೫ ಹಾಸ್ಟೆಲ್‌ಗಳಲ್ಲಿ ಇದು ಒಂದು ಸೇರಿದೆಯೋ ಹೇಗೆ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಶಿವಣ್ಣ.—ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಕಡಲ ತೀರ ಪ್ರದೇಶದಲ್ಲಿರುವ ಪ್ರವಾಸಿ ಧಾಮಗಳ ಅಭಿವೃದ್ಧಿ ಬಗ್ಗೆ

೨೫೨. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ಮತ್ತು ಕೇರಳದ ಕಡಲ ತೀರಗಳಲ್ಲಿ ಆಕರ್ಷಕ ಪ್ರವಾಸಿ ಧಾಮಗಳನ್ನು ರಚಿಸಿ ದಂತೆ, ಕರ್ನಾಟಕದ ಕರಾವಳಿಯಲ್ಲಿ ಸುಂದರವಾದ ಕಡಲ ತೀರಗಳಿದ್ದರೂ ಪ್ರವಾಸಿ ಧಾಮಗಳ ರಚನೆ ಆಗದಿರಲು ಕಾರಣಗಳು.

ಆ) ಪ್ರವಾಸಿ ಧಾಮಗಳ ರಚನೆಗಾಗಿ ಕರ್ನಾಟಕದ ಕರಾವಳಿಯಲ್ಲಿ ಆಯ್ಕೆ ಆದ ಸ್ಥಳಗಳು

ಇ) ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗುವ ಕ್ರಮಗಳೇನು ಹಾಗೂ ಯಾವ ಯಾವ ಅವ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ?